

# ಅರಿಯುತ್ತಲೇ ರೂಪಿಸುತ್ತ ಹೋಗುವುದು...

ಬಿಂದುಮಾಲಿನಿ ನಾರಾಯಣಸ್ವಾಮಿ

ನಾನು ಎಲ್ಲಕ್ಕಿಂತ ಮೊದಲು ಕಥೆ ಕೇಳುತ್ತೇನೆ. ಆ ಕಥೆಯ ಹಿಂದೆ ಏನು ನಡೆಯುತ್ತಿದೆ, ಅದರ ಮೂಡ್ ಯಾವ ರೀತಿ ಇದೆ ಎನ್ನುವುದನ್ನೂ ಕಥೆಯ ಎನರ್ಜಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ. ಇವೆಲ್ಲವೂ ನನಗೆ ತಿಳಿದಿದ್ದರೆ ಕೆಲಸ ಸುಲಭವಾಗುತ್ತದೆ. ನಂತರ ಯಾವ ಸನ್ನಿವೇಶದಲ್ಲಿ ಹಾಡು ಇರುತ್ತದೆ ಎನ್ನುವುದನ್ನು ತಿಳಿದುಕೊಳ್ಳುತ್ತೇನೆ. ಅದನ್ನು ಸ್ವಲ್ಪ ಚೆನ್ನಾಗಿ, ವಿವರವಾಗಿ ಚರ್ಚೆ ಮಾಡಿಕೊಳ್ಳುತ್ತೇನೆ.

ಕೆಲವು ಸಲ ನಿರ್ದೇಶಕರು ತುಂಬ ಸ್ಪಷ್ಟವಾಗಿ ಪ್ಲ್ಯಾನ್ ಮಾಡಿಕೊಂಡಿರುತ್ತಾರೆ. ಇನ್ನು ಕೆಲವು ಸಲ ನಮಗೇ ಪೂರ್ತಿ ಸ್ವಾತಂತ್ರ್ಯ ಕೊಟ್ಟು, 'ಟ್ಯೂನ್ ಕೊಟ್ಟುಬಿಡಿ, ಅದರ ಮೇಲೆ ದೃಶ್ಯಗಳನ್ನು ನಿರ್ಧರಿಸಿಕೊಳ್ಳುತ್ತೇವೆ' ಎನ್ನುತ್ತಾರೆ. ಈ ಎರಡರಲ್ಲಿ ಹೇಗಿದ್ದರೂ ಓಕೆ. ಆದರೆ ಯಾವ ದಾರಿಯನ್ನು ಆಯ್ದುಕೊಂಡಿದ್ದೇವೆ ಎಂಬ ಸ್ಪಷ್ಟತೆ ಇರಬೇಕಷ್ಟೆ. ಸ್ಪಷ್ಟತೆ ಎಂದರೆ ಯಾವುದು ಗೊತ್ತಿದೆಯೋ ಅದನ್ನು ಖಚಿತಪಡಿಸಿಕೊಳ್ಳುವುದು; ಗೊತ್ತಿಲ್ಲದಿರುವುದನ್ನು ಹುಡುಕುವುದು. ಕೆಲವು ಸಲ ನಿರ್ದೇಶಕರು ದೃಶ್ಯ, ಅದರ ಎನರ್ಜಿ, ರಿದಂ, ಟೆಂಪೊ ಎಲ್ಲವೂ ಹೀಗೆಯೇ ಇರಬೇಕು ಎಂದು ನಿಶ್ಚಯಮಾಡಿರುತ್ತಾರೆ.

'ಈಗ ಟ್ಯೂನ್ ಕೊಡಿ; ಅದಕ್ಕೆ ನಾವು ಸಾಹಿತ್ಯ ಬರೆಸಿಕೊಳ್ಳುತ್ತೇವೆ' ಎಂದು ಹೇಳುವವರೇ ಹೆಚ್ಚು. ಹೀಗೆ ಮೊದಲು ಟ್ಯೂನ್ ಹಾಡುವ ಪ್ರಕ್ರಿಯೆ ನಾನು ಕಲಿತುಕೊಂಡಿದ್ದು ಸಿನಿಮಾ ಸಂಗೀತ ಮಾಡಲು ಶುರುಮಾಡಿದ ಮೇಲೆಯೇ. ಮೊದಲೆಲ್ಲ ಕಬೀರರ ದೋಹೆ, ಬೇಂದ್ರೆಯವರ ಹಾಡುಗಳು ಎಲ್ಲದಕ್ಕೂ ನಾನು ಸಾಹಿತ್ಯವನ್ನು ಇಟ್ಟುಕೊಂಡು, ಅದು ನನ್ನ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ಇಟ್ಟುಕೊಂಡು ಸಂಗೀತ ಸಂಯೋಜನೆ ಮಾಡುತ್ತಿದ್ದೆ. ಆದರೆ ಸಿನಿಮಾದಲ್ಲಿ ಸಾಹಿತ್ಯ ಏನಾದರೂ ಇರಲಿ, ಆ ದೃಶ್ಯಕ್ಕೆ ಒಂದು ಮೂಡ್ ಸೃಷ್ಟಿಸುವಂಥ ಸಂಗೀತ ಸಂಯೋಜನೆ ಮಾಡಬೇಕು. ಯಾಕೆಂದರೆ ಅಲ್ಲಿ ಇಂಪ್ಯಾಕ್ಟ್ ಆಗುವುದು ಸಂಗೀತದಿಂದಲೇ.

ಒಂದು ಸಿನಿಮಾ ಹಾಡು ಎಂದರೆ ಅದಲ್ಲಿ ದೃಶ್ಯವಿರುತ್ತದೆ. ದೃಶ್ಯದ ಮೂಲಕವೂ ಕಥೆ ಹೇಳುತ್ತಿರುತ್ತಾರೆ. ಹಾಗೆಯೇ ಸಂಗೀತದ ಮೂಲಕವೂ ಕಥೆ ಹೇಳುತ್ತಿರುತ್ತಾರೆ. ಸಾಹಿತ್ಯವೂ ಅದೇ ಕೆಲಸವನ್ನು ಮಾಡುತ್ತಿರುತ್ತದೆ. ಆದರೆ ಈ ಮೂರೂ ಸಂಗತಿಗಳು ಒಂದೇ ಸಂಗತಿಯನ್ನು